**ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:13.09.2019 ರಂದು ಅಪರಾಹ್ನ 3:00 ಗಂಟೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಅಪ ಇಲಾಖೆಯ ಪಂಚತಂತ್ರ ತಂತ್ರಾಂಶದ ಎರಡನೇ ಆವತರಣಿಕೆ (ಪಂಚತಂತ್ರ 2.0) ಅಭಿವೃದ್ಧಿಪಡಿಸಿ ಅನುಷ್ಠಾನ ಮಾಡುವ ಬಗ್ಗೆ ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು:** (ಹಾಜರಾತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು(ಇ-ಆಡಳಿತ) ರವರು ಸ್ವಾಗತಿಸಿದರು.

ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಸಭೆಯನ್ನು ಉದ್ದೇಶಿಸಿ ಪಂಚತಂತ್ರ ತಂತ್ರಾಂಶವನ್ನು 2011ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರ ನಿರ್ವಹಣೆಗಾಗಿ NIC ರವರಿಂದ ಅಭಿವೃದ್ಧಿಪಡಿಸಿ ತಂತ್ರಾಂಶವನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಲಾಗಿತ್ತು. ಪಂಚತಂತ್ರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಸುಮಾರು 10 ವರ್ಷಗಳಾಗಿದ್ದು, ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣ ಮಾಡುವ ಅವಶ್ಯಕತೆಯಿರುತ್ತದೆ. ಆದುದರಿಂದ ಪಂಚತಂತ್ರ ತಂತ್ರಾಂಶದ ಎರಡನೇ ಆವತರಣಿಕೆ (Panchatantra 2.0) ಅನ್ನು ಅಭಿವೃದ್ಧಿಗೊಳಿಸಲು ಬೇಕಾದ ಅಗತ್ಯತೆಯ ಬಗ್ಗೆ ಚರ್ಚಿಸಲು ಈ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಈ ಕೆಳಗೆ ತಿಳಿಸಲಾಗಿರುವ ಉದ್ದೇಶದೊಂದಿಗೆ ಪಂಚತಂತ್ರ 2.0 ತಂತ್ರಾಂಶವನ್ನು ಅಭಿವೃದ್ಧಿಗೊಳಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

**ಉದ್ದೇಶಗಳು:**

1. ಪಂಚತಂತ್ರ 2.0 ತಂತ್ರಾಂಶವನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾ.ಪಂ. ಆಯವ್ಯಯ ಮತ್ತು ಲೆಕ್ಕ ಪತ್ರ) ನಿಯಮಾವಳಿ 2006 ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರನ್ವಯ ಅಭಿವೃದ್ಧಿಗೊಳಿಸುವುದು.
2. ಪಂಚತಂತ್ರ 2.0 ತಂತ್ರಾಂಶದ ಮೂಲಕ ಗ್ರಾಅಪ ಇಲಾಖೆಯ ಇತರೇ ತಂತ್ರಾಂಶಗಳಾದ ಗಾಂಧಿ ಸಾಕ್ಷಿ ಕಾಯಕ, ಇ-ಸ್ವತ್ತು, ಎಂ.ಜಿ.ಎನ್.ಆರ್.ಇ.ಜಿ.ಎ, SBM-G, ಬಾಪೂಜಿ ಸೇವಾ ಕೇಂದ್ರ ಮತ್ತು ಇತರೆ ಇಲಾಖೆಗೆ ಸಂಬಂಧಿಸಿದ ಎಲ್ಲಾ ತಂತ್ರಾಂಶಗಳ ಬಳಕೆಗಾಗಿ Single Sign On (SSO) ಪದ್ಧತಿಯನ್ನು ಬಳಸುವುದು.
3. ಪಂಚತಂತ್ರ 2.0 ತಂತ್ರಾಂಶವನ್ನು ಗ್ರಾಮ ಪಂಚಾಯತ್ ಲೆಕ್ಕಪತ್ರ ನಿರ್ವಹಣೆಯೊಂದಿಗೆ ಗ್ರಾಮ ಪಂಚಾಯತ್ ಆಡಳಿತ ಸುಧಾರಣೆಗೆ ಅನುವಾಗುವಂತೆ ಅಭಿವೃದ್ಧಿಪಡಿಸುವುದು.
4. ಪಂಚತಂತ್ರ 2.0 ತಂತ್ರಾಂಶ DSC ಬದಲಿಗೆ e-Sign ಬಳಕೆ ಮಾಡುವುದು.
5. ಪಂಚತಂತ್ರ 2.0 ತಂತ್ರಾಂಶದ ಮೂಲಕ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಲು ಅನುಕೂಲವಾಗುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಗಳಿಗೆ Dashboard ಗಳನ್ನು ವಿನ್ಯಾಸಗೊಳಿಸುವುದು.
6. ಪಂಚತಂತ್ರ 2.0 ತಂತ್ರಾಂಶದ ಮೂಲಕ ಗ್ರಾಮ ಪಂಚಾಯತ್ ನ ಎಲ್ಲಾ ಬ್ಯಾಂಕ್ ಖಾತೆಗಳ updation ಮತ್ತು ಖಜಾನೆ 2.0 ತಂತ್ರಾಂಶದೊಂದಿಗೆ Integrate ಮಾಡುವುದು.

ಮೇಲಿನ ಎಲ್ಲಾ ಮಾಹಿತಿಯನ್ನು ಆಧಾರಿಸಿ ಪ್ರಸಂಟೇಶನ್ ಅನ್ನು ತಯಾರಿಸಿದ್ದು, ಸಭೆಗೆ ಪ್ರಸ್ತುತ ಮಾಡಲು ರಾಜ್ಯ ಯೋಜನಾ ವ್ಯವಸ್ಥಾಪಕರು ಮಾನ್ಯ ಪ್ರಧಾನ ಕಾರ್ಯದರ್ಶಿ ರವರ ಅನುಮತಿ ಪಡೆದು, ಪ್ರಸ್ತುತಪಡಿಸಲಾಯಿತು.

ಸಂ:ಗ್ರಾಅಪ/15/ಇ-ಆಡಳಿತ/2019 ದಿನಾಂಕ: 23/09/2019

ಅದರಂತೆ ಪಂಚತಂತ್ರ ತಂತ್ರಾಂಶದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲಾಯಿತು. ಪಂಚತಂತ್ರ 2.0 ತಂತ್ರಾಂದ ಅಗತ್ಯತೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ಎಲ್ಲಾ ಅಂಶಗಳನ್ನು ಆಧಾರಿಸಿ ಮೊದಲನೇ ಹಂತದಲ್ಲಿ ಪಂಚತಂತ್ರ 2.0 ತಂತ್ರಾಂಶದಲ್ಲಿ ಪ್ರಸ್ತಾಪಿತ ಮಾಡ್ಯೂಲ್ ಗಳ ಬಗ್ಗೆ ಚರ್ಚಿಸಲಾಯಿತು.

1. **Single Sign On (SSO):**

   ಪ್ರಸ್ತುತ ಗ್ರಾಮ ಪಂಚಾಯತ್ ಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಮತ್ತು ಇತರೆ ಇಲಾಖೆಗಳ ಸುಮಾರು 15-20 ತಂತ್ರಾಂಶಗಳನ್ನು ಬಳಸಲಾಗುತ್ತಿದ್ದು, ಪ್ರತಿಯೊಂದು ತಂತ್ರಾಂಶಗಳಿಗೆ ಒಂದೊಂದು User id & Password ಗಳನ್ನು ಉಪಯೋಗಿಸಲಾಗುತ್ತಿದೆ. ಆದುದರಿಂದ, ಎಲ್ಲಾ ತಂತ್ರಾಂಶಗಳನ್ನು ಸಂಯೋಜನೆ ಮಾಡಿ ಪಂಚತಂತ್ರ 2.0 ತಂತ್ರಾಂಶದ ಮೂಲಕ Single Sign On (SSO) ಪದ್ಧತಿಯನ್ನು ಅಳವಡಿಸುವುದು.

2. **GP Meeting Automation**:

   ಗ್ರಾಮ ಪಂಚಾಯತ್ ಗಳಲ್ಲಿ ಗ್ರಾಮ ಸಭಾ, ವಾರ್ಡ್ ಸಭಾ, ಸ್ಥಾಯಿ ಸಮಿತಿ ಸಭೆ, ಗ್ರಾಮ ಪಂಚಾಯತ್ ಉಪ ಸಮಿತಿ ಸಭೆಗಳು, ಜಮಾಬಂಧಿ, ಕೆಡಿಪಿ ಸಭೆ ಮುಂತಾದವುಗಳನ್ನು ಕಾಲಕಾಲಕ್ಕೆ ಆಯೋಜಿಸಲಾಗುತ್ತಿದ್ದು, ಸದರಿ ಸಭೆಗಳಿಗೆ ಹಾಜರಾಗುವ ಸದಸ್ಯರ ಹಾಜರಾತಿಯನ್ನು e-Sign ಮೂಲಕ ಸೆರೆಹಿಡಿಯುವಂತೆ ಸಭಾ ಸೂಚನಾ ಪತ್ರಗಳನ್ನು ಪಂಚತಂತ್ರ 2.0 ತಂತ್ರಾಂಶದ ಮೂಲಕ ಸೃಜಿಸುವಂತೆ ಹಾಗೂ ಸಭೆಯ ನಡವಳಿಯೊಂದಿಗೆ ಸಭೆಯ ತೀರ್ಮಾನಗಳನ್ನು ಸೆರೆಹಿಡಿದು, ಸಭೆಗಳ automation ಮಾಡುವ ಅವಶ್ಯಕತೆಯಿರುತ್ತದೆ.

3. **E-Sign ಬಳಕೆ:**

   DSC ಮತ್ತು Biometric ಬದಲಿಗೆ ಗ್ರಾಮ ಪಂಚಾಯತ್ ಗಳಲ್ಲಿ e-Sign ಮೂಲಕ ಗ್ರಾಮ ಪಂಚಾಯತಿಗಳ ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ಹಾಜರಾತಿ ಸೆರೆಹಿಡಿಯುವುದು ಹಾಗೂ ಅನುಮೋದನೆ ಮತ್ತು ದೃಢೀಕರಣಕ್ಕಾಗಿ e-Sign ಬಳಕೆ ಮಾಡುವುದು.

4. **Double Entry Accounting System:**

   ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರು ನಿಗದಿಪಡಿಸಲಾದ ಪರಿಷ್ಕೃತ 8 MAS formats ಗಳನ್ನು ಬಳಸಿಕೊಂಡು Double Entry Accounting System ಅನ್ನು ಪಂಚತಂತ್ರ 2.0 ತಂತ್ರಾಂಶದ ಮೂಲಕ ಅಭಿವೃದ್ಧಿಪಡಿಸುವುದು.

5. **Linkage with Banking Data and Khajane 2.0:**

   ಗ್ರಾಮ ಪಂಚಾಯತ್ ಗಳಲ್ಲಿ ನಿರ್ವಹಣೆ ಮಾಡಲಾಗುತ್ತಿರುವ ಬ್ಯಾಂಕ್ ಖಾತೆಗಳನ್ನು ಬ್ಯಾಂಕ್ ಮರುಹೊಂದಾಣಿಕೆ ಮಾಡಲು ಖಜಾನೆ 2.0 ಅಥವಾ Banking Data ದೊಂದಿಗೆ ಸಂಯೋಜಿಸುವುದು.

6. **Profile Management**:

   ಪಂಚತಂತ್ರ 2.0 ತಂತ್ರಾಂಶದ ಮೂಲಕ ಗ್ರಾಮ ಪಂಚಾಯತ್ ಗಳ ಚುನಾಯಿತ ಸದಸ್ಯರ ಮತ್ತು ಅಧಿಕಾರಿಗಳ Profile ಅನ್ನು ಸೆರೆಹಿಡಿಯುವುದು ಹಾಗೂ ಗ್ರಾಮ ಪಂಚಾಯತಿಯ ನೌಕರರ HRMS Module ಅನ್ನು ಅಭಿವೃದ್ಧಿಗೊಳಿಸುವುದು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ KGID Number ಗಳನ್ನು ಸಂಯೋಜಿಸುವುದು.

ಸಂ:ಗ್ರಾಅಪ/15/ಇ-ಆಡಳಿತ/2019 ದಿನಾಂಕ: 23/09/2019.

7. **Dashboard:**

ಪಂಚತಂತ್ರ 2.0 ತಂತ್ರಾಂಶದ ಮೂಲಕ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಲು ಅನುಕೂಲವಾಗುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ Dashboard ಗಳನ್ನು ವಿನ್ಯಾಸಗೊಳಿಸುವುದು.

8. **Mobile Application ಮತ್ತು MPoS for tax collection:**

ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹಕ್ಕಾಗಿ Mobile Application ಅನ್ನು ಅಭಿವೃದ್ಧಿಗೊಳಿಸಿ MPoS ಬಳಕೆ ಮಾಡುವುದು.

9. **Tax Assessment Module:**

ಗ್ರಾಮ ಪಂಚಾಯತ್ ಗಳ ತೆರಿಗೆ ಪರಿಷ್ಕರಣೆಗಾಗಿ ಪಂಚತಂತ್ರ 2.0 ತಂತ್ರಾಂಶದಲ್ಲಿ ಮಾಡ್ಯೂಲ್ ಅನ್ನು ಅಭಿವೃದ್ಧಿಗೊಳಿಸುವುದು.

10. **Self Assessment Property tax Calculator:**

ಬಿ.ಬಿ.ಎಂ.ಪಿ. ಮಾದರಿಯಲ್ಲಿ ಗ್ರಾಮ ಪಂಚಾಯತ್ ಆಸ್ತಿಗಳ ಮೌಲ್ಯಮಾಪನಕ್ಕಾಗಿ Property tax calculator ಅನ್ನು ಅಭಿವೃದ್ಧಿಗೊಳಿಸಿ ಪಂಚತಂತ್ರ ತಂತ್ರಾಂಶದ ಮೂಲಕ ಅನುಷ್ಠಾನ ಮಾಡುವುದು.

11. **Payment Module:**

ಪಂಚತಂತ್ರ 2.0 ತಂತ್ರಾಂಶದ ಮೂಲಕ ಕಾಮಗಾರಿಗಳಿಗೆ ಸಂಬಂಧಪಟ್ಟ ಪಾವತಿಗಳನ್ನು, ಫಲಾನುಭವಿಗಳ ಅನುದಾನ, ಗ್ರಾಮ ಪಂಚಾಯತ್ ನೌಕರರ ವೇತನ, ಚುನಾಯಿತ ಪ್ರತಿನಿಧಿಗಳ ಗೌರವಧನವನ್ನು ಆನ್ ಲೈನ್ ಮೂಲಕ ಪಾವತಿ ಮಾಡುವಂತೆ ಪಂಚತಂತ್ರ ತಂತ್ರಾಂಶವನ್ನು ಅಭಿವೃದ್ಧಿಗೊಳಿಸುವುದು.

12. ಪಂಚತಂತ್ರ 2.0 ತಂತ್ರಾಂಶದ ಮೂಲಕ Court cases monitoring system, Grievance Re-Addressal System, Training Management Module ಗಳನ್ನು ಅನುಷ್ಠಾನ ಮಾಡುವುದು ಮತ್ತು ಪಂಚತಂತ್ರ 2.0 ತಂತ್ರಾಂಶವನ್ನು MoPR ರವರ ಎಲ್ಲಾ ತಂತ್ರಾಂಶಗಳೊಂದಿಗೆ ಸಂಯೋಜಿಸುವುದು.

ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಅಪ ಇಲಾಖೆರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಪಂಚತಂತ್ರ 2.0 ತಂತ್ರಾಂಶ ವಿನ್ಯಾಸಗೊಳಿಸಲು ಪ್ರಮುಖ ತಂಡವಾಗಿದ್ದು, ಮುಂದಿನ ಸಭೆಯೊಳಗೆ ಪಂಚತಂತ್ರ 2.0 ತಂತ್ರಾಂಶದ ಬಗ್ಗೆ ಸಲಹೆ ಮತ್ತು ಪ್ರತಿಕ್ರಿಯೆಯನ್ನು ನೀಡಲು ಸಭೆಗೆ ತಿಳಿಸಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/15/ಇ-ಆಡಳಿತ/2019
ದಿನಾಂಕ: 23/09/2019.

(ಉಮಾ ಮಹದೇವನ್ ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸಂ:ಗ್ರಾಅಪ/15/ಇ-ಆಡಳಿತ/2019 ದಿನಾಂಕ: 23/09/2019.

ಇವರಿಗೆ:

1. ನಿರ್ದೇಶಕರು(ಪಂ.ರಾಜ್-1 & 2), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
5. ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೋಲಾರ.
6. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ.
7. ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
8. ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಮೈಸೂರು.
9. ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
10. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಬೆಂಗಳೂರು ಪೂರ್ವ.
11. ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಕೊಪ್ಪ.
12. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಮೆನ್ನಬೆಟ್ಟು.
13. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ರಾಜಾನುಕುಂಟೆ.
14. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಸೋಮನಹಳ್ಳಿ.
15. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹೊದ್ದೂರು, ಮಡಿಕೇರಿ ತಾ.ಪಂ.
16. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹಾರೋಹಳ್ಳಿ(ಜೆ).
17. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡೂರು.
18. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ದಬ್ಬೆಘಟ್ಟ.
19. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡಳ್ಳಿ.
20. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬಿಳುಗುಂಬ.
21. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಅಗಲಗುರ್ಕಿ.
22. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ತುಮಕೂರು.
23. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
24. ಶ್ರೀ ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
25. ಶ್ರೀ ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
26. ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
27. ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.

ಪ್ರತಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.

## ಅನುಬಂಧ

ಶ್ರೀಮತಿ/ಶ್ರೀ:

1. ಉಮಾ ಮಹದೇವನ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
2. ವಿ. ನಾಗರಾಜ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
3. ಅಶ್ರಫುಲ್ಲಾ, ನಿರ್ದೇಶಕರು(ಪಂ.ರಾಜ್-1 & 2), ಗ್ರಾಅಪ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.
5. ಪಿ. ಶ್ರೀಕೃಷ್ಣಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಗಗನ್ ಎ.ಎಸ್., ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
7. ಸಂಜೀವಪ್ಪ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೋಲಾರ.
8. ಸಚಿನ್ ಕುಮಾರ್, ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
9. ಮನೋಜ್ ಕುಮಾರ್, ಕೆ.ಎಸ್., ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಮೈಸೂರು.
10. ಚಂದ್ರಕಾಂತ್, ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
11. ಕೆ. ಮಂಜುನಾಥ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬೆಂಗಳೂರು ಪೂರ್ವ.
12. ಚೇತನ್ ಕೆ.ಜಿ., ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಕೊಪ್ಪ.
13. ರಮ್ಯ ಕೆ.ಎಸ್., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಮೆನ್ನಬೆಟ್ಟು.
14. ರಾಜೇಶ್ ಹೆಚ್.ಆರ್., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ರಾಜಾನುಕುಂಟೆ.
15. ಹೆಚ್. ಬಿ. ಸಿದ್ಧರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಸೋಮನಹಳ್ಳಿ.
16. ಅಬ್ದುಲ್ಲ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹೊದ್ದೂರು, ಮಡಿಕೇರಿ ತಾ.ಪಂ.
17. ಶೋಭಾರಾಣಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹಾರೋಹಳ್ಳಿ(ಜೆ).
18. ಮಹೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡೂರು.
19. ಸುಬ್ಬರಾಜು ಅರಸ್, ವಿ.ಆರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ದಬ್ಬೆಘಟ್ಟ.
20. ಮಧುರೇಶ್ವರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡಳ್ಳಿ.
21. ಪುರುಷೋತ್ತಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬಿಳುಗುಂಬ.
22. ಮೋಹನ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಅಗಲಗುರ್ಕಿ.
23. ಹರೀಶ್ ಬಿ.ಟಿ., ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ತುಮಕೂರು.
24. ಬಸವರಾಜು, ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
25. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
26. ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
27. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
28. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.